SEVA BHARATHI
सेवा ही परमो धर्मः

ಸಂಚಿಕೆ : 01
ಸಂಪುಟ : 05

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ – ಜನವರಿ 2024

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216




## ಶಿರಸಿಯಲ್ಲಿ 22ನೇ ವಸತಿಯುತ ಉಚಿತ ಆರೋಗ್ಯ ತಪಾಸಣಾ ಶಿಬಿರ

## ಬಡಕೋಡಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಬಟ್ಟಲು ವಿತರಣೆ

## ಬೆನ್ನುಹುರಿ ಅಪಘಾತಕ್ಕೊಳಗಾದವರ ಗಾಲಿಕುರ್ಚಿ ಜಾಥಾ

## ಶಿಬಿರದಲ್ಲಿ ಉಚಿತ ಸೆಲ್ಫ್‌ಕೇರ್ ಕಿಟ್ ಹಾಗೂ ಮೆಡಿಕಲ್ ಕಿಟ್ ವಿತರಣೆ

## ಬೆನಕ ಆಸ್ಪತ್ರೆಯಲ್ಲಿ ಬೃಹತ್ ರಕ್ತದಾನ ಶಿಬಿರ

ಬೆನ್ನುಹುರಿ ಅಪಘಾತಕ್ಕೊಳಗಾಗಿ, ಪ್ರಸ್ತುತ ಹೃದಯ ಸಮಸ್ಯೆಯಿಂದ
ಕಷ್ಟ ಅನುಭವಿಸುತ್ತಿರುವ ದಿವ್ಯಾಂಗನ ಕೈಹಿಡಿದ ಸೇವಾಭಾರತಿ ಸಂಸ್ಥೆ

ಯಶೋಗಾಥೆ

## ನಮ್ಮಿಂದಿಷ್ಟು

ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಮೂರು ದಿನಗಳ ಕಾಲ ಉಚಿತವಾಗಿ ಶಿರಸಿಯಲ್ಲಿ CADIC (Community Aided disability Intervention Camp) ಶಿಬಿರ ಆಯೋಜನೆ ಮಾಡಲಾಯಿತು. ಈವರೆಗೆ ಆಯೋಜಿಸಿದ 22 ಶಿಬಿರಗಳಿಂದ ಬಹುಕೋನದಲ್ಲಿ ನೋಡಿದರೂ ವಿಶೇಷವಾಗಿತ್ತು. ನಮ್ಮ ಎಲ್ಲಾ ಸಿಬ್ಬಂದಿಗಳೂ ಇದಕ್ಕಾಗಿ ತಯಾರಾಗಿಯೇ ಇದ್ದರು. ದಾಖಲಾದ ಎಲ್ಲ 13 ಮಂದಿಗೂ ಬೆನ್ನುಹುರಿ ಅಪಘಾತ, ಅದರ ನಿರ್ವಹಣೆ, ದ್ವಿತೀಯಾಂತರ ಸಮಸ್ಯೆಗಳು, ಆಹಾರ ಪಥ್ಯ, ಸರಕಾರದ ಸೌಲಭ್ಯಗಳು, ಒತ್ತಡ ಗಾಯ ನಿರ್ವಹಣೆ, ಸ್ವ-ಉದ್ಯೋಗದ ಬಗ್ಗೆ ಭರಪೂರ ಮಾಹಿತಿಗಳನ್ನು ಕೊಡುವುದರಲ್ಲಿ ಸಫಲರಾದೆವು. ಜೊತೆಗೆ ಗಾಲಿಕುರ್ಚಿ ಕೌಶಲ್ಯ, ಜೀವ ನಿರ್ವಹಣೆ ಬಗ್ಗೆ ತರಬೇತಿಯನ್ನು ಕೊಡಲಾಯಿತು. ಅಗತ್ಯವಿದ್ದವರಿಗೆ ಎಕ್ಸ್‌ರೇ, ಎಲ್ಲರಿಗೂ ರಕ್ತ ಪರೀಕ್ಷೆ, ರಕ್ತದೊತ್ತಡ ಪರೀಕ್ಷೆ, ದಂತ ಪರೀಕ್ಷೆ ಮಾಡಲಾಯಿತು. ತಜ್ಞ ವೈದ್ಯರಿಂದ ಸಲಹೆಗಳನ್ನು ಕೊಡಿಸಲಾಯಿತು. ವಿಶೇಷವಾಗಿ ಕೊನೆಯ ದಿನ ಗಾಲಿಕುರ್ಚಿ ಜಾಥಾವನ್ನು ಹಮ್ಮಿಕೊಳ್ಳಲಾಯಿತು. ಇದುವೇ ಈ ಬಾರಿಯ ಶಿಬಿರದ ವಿಶೇಷತೆಯಾಗಿತ್ತು.

ಶಿಬಿರಕ್ಕೆ ಸ್ಥಳಾವಕಾಶ ಅವಕಾಶ ಕೊಟ್ಟ Sirsi Scan & Diagnostic Centre, Indian Medical Association (IMA), Rotary Club Sirsi ಇವರೆಲ್ಲರೂ ಯಶಸ್ಸಿನ ರುವಾರಿಗಳು. ಗಾಲಿಕುರ್ಚಿ ಜಾಥಾಕ್ಕೆ ಸ್ಥಳೀಯ ಶಾಲಾ ಕಾಲೇಜು ವಿದ್ಯಾರ್ಥಿಗಳು, ನರ್ಸ್ ದಾದಿಯರು, ಆಶಾ ಕಾರ್ಯಕರ್ತರು ವಿ.ಆರ್.ಡಬ್ಲ್ಯೂ, ಎಂ.ಆರ್.ಡಬ್ಲ್ಯೂ ಹಾಗೂ ಪೊಲೀಸ್ ಸಿಬ್ಬಂದಿಗಳೂ ಪೂರಕವಾಗಿ ಸ್ಪಂದಿಸಿದ್ದು, ಜಾಥಾವನ್ನು DYSP ಕೆ.ಎಲ್. ಗಣೇಶ್ ಹಸಿರು ನಿಶಾನೆ ತೋರಿಸಿ ಉದ್ಘಾಟಿಸಿ ಶುಭ ಹಾರೈಸಿದರು. ಆ ಭಾಗದಲ್ಲಿ ಬೆನ್ನುಹುರಿ ಅಪಘಾತ ಬಗ್ಗೆ ಜಾಗೃತಿಯಾಗಿ ಈ ರೀತಿಯಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಎಂಬುದು ಖುಷಿಯ ಸಂಗತಿ.

ಉಜಿರೆಯ ಬೆನಕ ಆಸ್ಪತ್ರೆ ನಮಗೆ ಪ್ರಾರಂಭ ದಿಂದಲೂ ತನ್ನ ಕೈಲಾದಷ್ಟು ಸಹಾಯ, ಸಹಕಾರ ಕೊಡುತ್ತಾ ಬಂದಿದೆ. ಅಲ್ಲಿ 2ನೇ ಬಾರಿ ನಡೆದ ರಕ್ತದಾನ ಶಿಬಿರಕ್ಕೆ ನಾವು ಪೂರ್ಣ ರೀತಿಯಲ್ಲಿ ಸಹಭಾಗಿತ್ವವನ್ನು ನೀಡಿರುತ್ತೇವೆ. ಬೇರೆ ಬೇರೆ ಸಂಘ ಸಂಸ್ಥೆಗಳೂ ಸಹಭಾಗಿತ್ವ ನೀಡಿದ್ದರು. ಒಟ್ಟು 73 ಮಂದಿ ರಕ್ತದಾನ ಮಾಡಿದರು. ರೆಡ್‌ಕ್ರಾಸ್ ಸೊಸೈಟಿ, ಮಂಗಳೂರಿನ ಲೇಡಿಗೋಷನ್ ಆಸ್ಪತ್ರೆಯ ರಕ್ತನಿಧಿ ಕೇಂದ್ರ ಮೂಲಕ ರಕ್ತ ಸಂಗ್ರಹಿಸಲಾಯಿತು. ಗುಣಾತ್ಮಕವಾಗಿಯೂ, ಸಂಖ್ಯಾತ್ಮಕವಾಗಿಯೂ ಈ ಶಿಬಿರ ಯಶಗೊಂಡಿದೆ ಎನ್ನಬಹುದು.

Selco Pvt. Ltd. ನವ್ಮೊಂದಿಗೆ ಒತ್ತಡಗಾಯವಿರುವವರಿಗೆ ಅನಿಯಮಿತ ವಿದ್ಯುತ್‌ಶಕ್ತಿಯ ಘಟಕಕ್ಕಾಗಿ ಮಾತುಕತೆ ನಡೆದಿದೆ. ಮುಂದಿನ ದಿನಗಳಲ್ಲಿ ಇದು ಒಂದು ದೊಡ್ಡ ಪರಿಣಾಮಕಾರಿಯಾದ ಬೆಳವಣಿಗೆಯಾಗುವುದರಲ್ಲಿ ಸಂಶಯವಿಲ್ಲ.

ತಮ್ಮ ಸಹಕಾರ ನಿರಂತರವಿರಲಿ ಎಂದು ಆಶಿಸುತ್ತೇವೆ.

***ಸೇವಾ ಹೀ ಪರಮೋ ಧರ್ಮಃ***

**ಇತೀ ತಮ್ಮವ,**

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

**ಸೇವಾನಿಕೇತನ, ಕನ್ಯಾಡಿ–II**
**ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216**
**ಮೊ.: 99454 91241**

**ಸೇವಾ ಕೇಂದ್ರ :**

**ಸೇವಾಧಾಮ**
**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)**
**ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ**
**ಕೊಕ್ಕಡ ಗ್ರಾಮ – 574 198**
**ಮೊ.: 94482 54888**

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ಹರೀಶ್ ಟಿ. ಪಿ.
6. ಶ್ರೀ ಗೋಪಾಲ ಕೆ. ವಿ.
7. ಶ್ರೀಮತಿ ಜೊಯ್ಸ್ ಫಿರೇರಾ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ವಿಜಯ ಕೊಡವೂರು
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಶಿರಸಿಯಲ್ಲಿ 22ನೇ ವಸತಿಯುತ ಉಚಿತ ಆರೋಗ್ಯ ತಪಾಸಣಾ ಶಿಬಿರ




ಶಿರಸಿ (ಜ. 11) : ಸೇವಾಭಾರತಿ ಸೇವಾಧಾಮ, ಉತ್ತರ ಕನ್ನಡ ಜಿಲ್ಲೆ ಇದರ ಆಶ್ರಯದಲ್ಲಿ ಶಿರಸಿ ಸ್ಕ್ಯಾನ್ ಸೆಂಟರ್, ರೋಟರಿ ಕ್ಲಬ್, ಶಿರಸಿ ಹಾಗೂ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ಶಿರಸಿ ಇವುಗಳ ಸಹಯೋಗದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ವಸತಿಯುತ 22ನೇ ಉಚಿತ ಆರೋಗ್ಯ ತಪಾಸಣೆ ಹಾಗೂ ಗಾಲಿಕುರ್ಚಿ ಜಾಥಾ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಜನವರಿ 11 ರಂದು ಶಿರಸಿ ಸ್ಕ್ಯಾನ್ ಡಯಾಗ್ನೋಸ್ಟಿಕ್ ಮತ್ತು ರಿಸರ್ಚ್ ಸೆಂಟರ್‌ನಲ್ಲಿ ನಡೆಯಿತು. ಸೇವಾಭಾರತಿಯ ಸೀನಿಯರ್ ಮ್ಯಾನೇಜರ್ ಚರಣ್ ಕುಮಾರ್ ಎಂ. ಸಂಸ್ಥೆಯ ಬಗ್ಗೆ ಪ್ರಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮವನ್ನು ಶಿರಸಿ ರೋಟರಿ ಕ್ಲಬ್ ಅಧ್ಯಕ್ಷರು ರೊ. ಶ್ರೀಧರ್ ಹೆಗಡೆ ಉದ್ಘಾಟಿಸಿ, ಸೇವಾಧಾಮವು ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಆಶಾಕಿರಣವಾಗಿದೆ ಎಂದು ಉದ್ಘಾಟಕರ ನುಡಿಗಳನ್ನಾಡಿದರು.

ಶಿರಸಿ ಸ್ಕ್ಯಾನ್ ಸೆಂಟರ್‌ನ ಡಾ. ದಿನೇಶ್ ಹೆಗಡೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಶಿರಸಿ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್‌ನ ಅಧ್ಯಕ್ಷರು ಡಾ. ಮಧುಕೇಶ್ವರ ಜಿ. ವಿ. ಫಲಾನುಭವಿಗಳಿಗೆ ಶುಭಹಾರೈಸಿದರು. ಶಿರಸಿ ರೋಟರಿ ಕ್ಲಬ್‌ನ ರೊ. ಮಹೇಶ್ ತೆಲಂಗ್, ಶಿರಸಿಯ ಪೊಲೀಸ್ ಉಪನಿರೀಕ್ಷಕರಾದ ಶ್ರೀ ನಾಗಪ್ಪ ಬಿ. ಹಿತನುಡಿಗಳನ್ನಾಡಿದರು. ಸೇವಾಭಾರತಿ ಖಜಾಂಚಿ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಅಧ್ಯಕ್ಷೀಯ ನುಡಿಗಳನ್ನಾಡಿದರು. ವೇದಿಕೆಯಲ್ಲಿ ಶಿರಸಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ತರಬೇತುದಾರರಾದ ಶ್ರೀ ಕೃಷ್ಣ ಮಂಜುನಾಥ್ ಪೂಜಾರಿ, ಶಿರಸಿ ಸ್ಕ್ಯಾನ್ ಸೆಂಟರ್ ಯುರೋಲಾಜಿಸ್ಟ್ ಡಾ. ರೋಹಿತ್ ಹೆಗಡೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಕಾರ್ಯಕ್ರಮ ಸಂಯೋಜಕರಾದ ಶ್ರೀ ಆಶ್ರಿತ್ ಸಿ.ಪಿ., ಹಿರಿಯ ಕ್ಷೇತ್ರ ಸಂಯೋಜಕರಾದ ಶ್ರೀ ಮನು. ಆರ್, ಕ್ಷೇತ್ರ ಸಂಯೋಜಕರಾದ ಶ್ರೀ ನಾಗಾರ್ಜುನ್, ಸೇವಾಧಾಮದ ಫಿಸಿಯೋಥೆರಪಿಸ್ಟ್ ಶ್ರೀ ಗಣೇಶ್ ಕಾರ್ತಿಕ್ ಉಪಸ್ಥಿತರಿದ್ದರು.

ಒಟ್ಟು 12 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು 3 ದಿನಗಳ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ಕಾರ್ಯಕ್ರಮವನ್ನು ಸೇವಾ ಭಾರತಿ ಕ್ಷೇತ್ರ ಸಂಯೋಜಕರು ಶ್ರೀ ಶಶಾಂತ್ ನಿರೂಪಿಸಿ, ಸ್ವಾಗತಿಸಿದರು. ಕಾರ್ಯಕ್ರಮ ಸಂಯೋಜಕರು ಶ್ರೀ ಆಶ್ರಿತ್ ಸಿ.ಪಿ. ಧನ್ಯವಾದವಿತ್ತರು.

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಚಿತ್ಪಾವನ ಬ್ರಾಹ್ಮಣರ ಬಳಗ, ಉಜಿರೆ

## ಮಹನೀಯ ದಾನಿಗಳು

ಶ್ರೀಮತಿ ದಿವ್ಯ ಪುರಂದರ್, ಬೆಂಗಳೂರು
ಶ್ರೀ ಯಶವಂತ ಪಟವರ್ಧನ್, ಬೆಳ್ತಂಗಡಿ
ಮಾಸ್ಟರ್ ನಿತಿನ್ ಪ್ರದೀಪ್, ಮಂಗಳೂರು
ಶ್ರೀ ಸಿದ್ಧಾಂತ್ ಆಲೂರ್, ಶಿರಸಿ
ಶ್ರೀ ತುಕ್ರಪ್ಪ ಶೆಟ್ಟಿ, ಕೊಕ್ಕಡ
ಶ್ರೀಮತಿ ಬಿ. ಲೀಲಾವತಿ, ಬೆಂಗಳೂರು
ಶ್ರೀ ಸತ್ಯನಾರಾಯಣ ರಾವ್, ನಿಡ್ಲೆ
ಡಾ. ಸಾಯಿನಾಥ್, ಮೈಸೂರ್
ಶ್ರೀಮತಿ ವಿಜಯ. ಪಿ, ಪುತ್ತೂರು
ಶ್ರೀ ರಾಧಾಕೃಷ್ಣ. ಕೆ, ನೆಲ್ಯಾಡಿ
ಶ್ರೀ ಕಿಶನ್ ಪಡುಬಿದ್ರೆ, ಬೆಂಗಳೂರು
ಶ್ರೀಮತಿ ಪೂರ್ಣಿಮಾ ಕಿಣಿ, ದೊಂಡೋಲೆ
ಶ್ರೀ ಜಿ.ಎಸ್. ನಟೇಶ್, ಶಿವಮೊಗ್ಗ
ಶ್ರೀ ಮಹೇಶ್ ಮತ್ತು ಕುಟುಂಬ, ಮೂಡಿಗೆರೆ
ಶ್ರೀ ನಂದೀಶ್, ಶಿವಮೊಗ್ಗ
ಶ್ರೀ ಚಂಪಲಾಲ್
ಶ್ರೀಮತಿ ಸೌಮ್ಯ ಮನು, ಧರ್ಮಸ್ಥಳ

## ಸೇವಾನಿಧಿ ದಾನಿಗಳು

ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಮಧ್ವಮೂರ್ತಿ. ಪಿ, ಉಡುಪಿ
ಶ್ರೀ ಅವಿನಾಶ್ ಕನ್ಯಾಡಿ
ಶ್ರೀಮತಿ ಸವಿತ ಎಂ. ರಾವ್, ಕನ್ಯಾಡಿ
ಶ್ರೀಮತಿ ಬಬಿತ, ಕನ್ಯಾಡಿ
ಶ್ರೀ ಕಾರ್ತಿಕ್. ಕೆ, ಧರ್ಮಸ್ಥಳ
ಶ್ರೀಮತಿ ಛಾಯಾ ಸಿ.ಎಸ್, ಉಜಿರೆ
ಡಾ. ರಾಮಕೃಷ್ಣ. ಜಿ.ಎನ್, ಕನ್ಯಾಡಿ
ಮಾಸ್ಟರ್ ಅದ್ವೈತ್. ವೈ, ಕನ್ಯಾಡಿ
ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ
ಶ್ರೀ ಮಧುಸೂದನ್, ಉಜಿರೆ
ಶ್ರೀ ವಿ. ರಾಮದಾಸ್ ಭಂಡಾರ್ಕರ್, ಉಜಿರೆ
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು

## ವಸ್ತು ರೂಪದಲ್ಲಿ ದೇಣಿಗೆ ನೀಡಿದ ದಾನಿಗಳು

ಹವ್ಯಕ ಮಂಡಲ, ಉಜಿರೆ ವಲಯ

# ಬಡಕೋಡಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಬಟ್ಟಲು ವಿತರಣೆ



**ಬಡಕೋಡಿ (ಜ.19) :** ರಾಮನಗರ ನವಚೇತನ ಚಾರಿಟೇಬಲ್ ಟ್ರಸ್ಟ್ ಆಫ್ ಡಿಸೇಬಲ್ಸ್‌ನ ಸ್ಥಾಪಕಾಧ್ಯಕ್ಷರು ಶ್ರೀಮಂಜುನಾಥ ಕೆ.ಎಸ್.ರವರ ಸಹಕಾರದಲ್ಲಿ ಬಡಕೋಡಿ ಸರಕಾರಿ ಶಾಲಾಮಕ್ಕಳಿಗೆ ಉಚಿತವಾಗಿ ನೀಡಿದ ಊಟದ ಬಟ್ಟಲುಗಳನ್ನು ಸೇವಾಭಾರತಿ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ವಿದ್ಯಾರ್ಥಿಗಳಿಗೆ ಜನವರಿ 19 ರಂದು ಹಸ್ತಾಂತರಿಸಿದರು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಮಕ್ಕಳೊಂದಿಗೆ ಸಂವಾದ ನಡೆಸಿ, ತದ ನಂತರ ತಾವು ಬೆಳೆದು ಬಂದ ದಾರಿಯ ಸವಿ ನೆನಪುಗಳನ್ನು ಮಕ್ಕಳೊಂದಿಗೆ ಹಂಚಿಕೊಂಡರು. ವೇದಿಕೆಯಲ್ಲಿ ಶಾಲಾ ಮಾಜಿ ಅಧ್ಯಕ್ಷರು ಶ್ರೀ ಶ್ರೀನಿವಾಸ್ ಉಪಾಧ್ಯಾಯ, ಗ್ರಾಮ ಸಮೃದ್ಧಿ ಸಹಕಾರದ ಅಧ್ಯಕ್ಷರು ಶ್ರೀಮತಿ ಶಶಿಕಲಾ, ಶ್ರೀ ಸುಧಾಕರ್ ನಾಯ್ಕ್ ಉಪ ಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಮ್ಯಾನೇಜರ್ ಶ್ರೀ ಮೋಹನ್, ಅಕೌಂಟೆಂಟ್ ಕು. ಅಕ್ಷತಾ, ಡಾಕ್ಯುಮೆಂಟೇಷನ್ ಸಂಯೋಜಕಿ ಕು. ಅಪೂರ್ವ ಪಿ.ವಿ. ಹಾಗೂ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು. ಒಟ್ಟು 75 ಮಂದಿ ವಿದ್ಯಾರ್ಥಿಗಳಿಗೆ ಉಚಿತ ಊಟದ ಬಟ್ಟಲುಗಳನ್ನು ವಿತರಿಸಲಾಯಿತು.

## ಜನವರಿ ತಿಂಗಳ ಸೇವಾ ಕಾರ್ಯಗಳು

1. ಗಾಲಿಕುರ್ಚಿ ವಿತರಣೆ – 6
2. ಸೆಲ್ಫ್‌ಕೇರ್ ಮತ್ತು ಮೆಡಿಕಲ್ ಕಿಟ್ – 12
3. ಗಾಳಿಹಾಸಿಗೆ – 4

# ಬೆನ್ನುಹುರಿ ಅಪಘಾತಕ್ಕೊಳಗಾದವರ ಗಾಲಿಕುರ್ಚಿ ಜಾಥಾ



**ಶಿರಸಿ (ಜ.13) :** ಸೇವಾಭಾರತಿ ಸೇವಾಧಾಮ, ಉತ್ತರಕನ್ನಡ ಜಿಲ್ಲೆ ಇದರ ಆಶ್ರಯದಲ್ಲಿ ಶಿರಸಿ ಸ್ಕ್ಯಾನ್ ಸೆಂಟರ್, ರೋಟರಿ ಕ್ಲಬ್, ಶಿರಸಿ ಹಾಗೂ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ಶಿರಸಿ ಇವುಗಳ ಸಹಯೋಗದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ನಡೆಸಿದ ವಸತಿಯುತ 22ನೇ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಜನವರಿ 13 ರಂದು ಜನಸಾಮಾನ್ಯರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಅರಿವು ಮೂಡಿಸಲು ಮತ್ತು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದಾಗಿ ಗಾಲಿಕುರ್ಚಿ ಜಾಥಾವನ್ನು ನಡೆಸಲಾಯಿತು.

ಗಾಲಿಕುರ್ಚಿ ಜಾಥಾ ಕಾರ್ಯಕ್ರಮಕ್ಕೆ ಶಿರಸಿ ತಾಲೂಕಿನ ಪೊಲೀಸ್ ಉಪ ಅಧೀಕ್ಷಕರು ಶ್ರೀ ಕೆ.ಎಲ್.ಗಣೇಶ್ ಚಾಲನೆ ನೀಡಿದರು. ಜಾಥಾವನ್ನು ಚರ್ಚ್ ರೋಡ್ ಮುಖಾಂತರ ಪ್ರಾರಂಭಿಸಿ ಪೋಸ್ಟ್ ಆಫಿಸ್ ತಲುಪಿತದ ನಂತರ ಸಿ.ಪಿ. ಬಜಾರ್‌ನಿಂದ ಮರಳಿ ಶಿರಸಿ ಸ್ಕ್ಯಾನ್ ಸೆಂಟರ್‌ವರೆಗೆ ನಡೆಸಲಾಯಿತು.

ಒಟ್ಟು 14 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರೊಂದಿಗೆ, ಸೇವಾಭಾರತಿ ಖಜಾಂಚಿ ಶ್ರೀ ಕೆ.ವಿನಾಯಕ ರಾವ್, ಶಿರಸಿ ತಾಲೂಕಿನ ವಿ.ಆರ್.ಡಬ್ಲ್ಯೂ, ಎಂ.ಆರ್.ಡಬ್ಲ್ಯೂ, ಆಶಾಕಾರ್ಯಕರ್ತೆಯರು, ಆಸ್ಪತ್ರೆಯ ಸಿಬ್ಬಂದಿಗಳು ಹಾಗೂ ಶಾಲಾ ವಿದ್ಯಾರ್ಥಿಗಳು ಸೇರಿದಂತೆ 300 ಮಂದಿ ಜಾಥಾದಲ್ಲಿ ಭಾಗವಹಿಸಿದ್ದರು.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ



ವಿನಯ್ ಕುಮಾರ್ ಕೆ.ಎಂ. ಆದ ನಾನು ಕಡೂರಿನಿಂದ ಬಂದಿದ್ದೇನೆ. ನನಗೆ ಬೈಕ್‌ನಿಂದ ಬಿದ್ದು T8 ಇಂಜ್ಯೂರಿ ಆಗಿದ್ದು, ನನಗೆ ಬ್ಯಾಲೆನ್ಸ್ ಇರಲಿಲ್ಲ. ಕಂಪ್ಲೀಟ್ ಡಿಪೆಂಡೆಂಟ್ ಆಗಿದ್ದೆ. ಇಲ್ಲಿ ಬಂದ ನಂತರ ನಾನು ಶಿಸ್ತು, ಬ್ಯಾಲೆನ್ಸ್ ಹಾಗೂ ಫಿಟ್ ಆಗಿದ್ದೇನೆ. 70 % ಸ್ವತಂತ್ರನಾಗಿದ್ದೇನೆ. **I'm thankful to physiotherapists and all the staff of the Sevadhama.**

– ವಿನಯ್, ಕಡೂರು

## ಗಾಲಿಕುರ್ಚಿ ವಿತರಣೆ



ಶ್ರೀ ಉಮೇಶ್, ಅಂಡಿಂಜೆ



ಶ್ರೀ ದಿನೇಶ್ ನಾಯ್ಕ್, ಶಿರಸಿ



ಶ್ರೀ ಮಧುಕೇಶ್ವರ್, ಎಲ್ಲಾಪುರ



ಶ್ರೀಮಾಲತೇಶ್, ಬನವಾಸಿ



ಶ್ರೀ ಕುಸುಮಾಕರ್ ನಾಯ್ಕ್, ಸಿದ್ದಾಪುರ

# ಶಿಬಿರದಲ್ಲಿ ಉಚಿತ ಸೆಲ್ಫ್‌ಕೇರ್‌ಕಿಟ್ ಹಾಗೂ ಮೆಡಿಕಲ್ ಕಿಟ್ ವಿತರಣೆ












**ಶಿರಸಿ (ಜ.13) :** ಸೇವಾಭಾರತಿ ಸೇವಾಧಾಮ, ಉತ್ತರ ಕನ್ನಡ ಜಿಲ್ಲೆ ಇದರ ಆಶ್ರಯದಲ್ಲಿ ಶಿರಸಿ ಸ್ಕ್ಯಾನ್ ಸೆಂಟರ್, ರೋಟರಿ ಕ್ಲಬ್, ಶಿರಸಿ ಹಾಗೂ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ಶಿರಸಿ ಇವುಗಳ ಸಹಯೋಗದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ನಡೆಸಿದ ವಸತಿಯುತ 22ನೇ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಫಲಾನುಭವಿಗಳಿಗೆ ಸಾಧನ ಸಲಕರಣೆಗಳು ಹಾಗೂ ಅಗತ್ಯವಿರುವ ಸೆಲ್ಫ್‌ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್‌ಗಳನ್ನು ಶಿರಸಿ ರೋಟರಿ ಕ್ಲಬ್‌ನ ರೊ.ಮಹೇಶ್ ತೆಲಂಗ್‌ರ ಪತ್ನಿ ಸೌಜನ್ಯ ತೆಲಂಗ್, ರೋಟರಿ ಕ್ಲಬ್‌ನ ಅಧ್ಯಕ್ಷರು ರೊ. ಶ್ರೀಧರ್ ಹೆಗಡೆ, ಸೇವಾಭಾರತಿ ಸೀನಿಯರ್ ಮ್ಯಾನೇಜರ್ ಚರಣ್ ಕುಮಾರ್ ಎಂ. ಅವರಿಂದ ಹಸ್ತಾಂತರಿಸಲಾಯಿತು.

ಕಾರ್ಯಕ್ರಮದಲ್ಲಿ ಅರ್ಹ 4 ಮಂದಿ ಫಲಾನುಭವಿಗಳಿಗೆ ಗಾಲಿಕುರ್ಚಿ, ಒಬ್ಬರಿಗೆ ಕಾಮೋಡೋ ಗಾಲಿಕುರ್ಚಿ, 6 ಮಂದಿ ದಿವ್ಯಾಂಗರಿಗೆ ಮೆಡಿಕಲ್ ಕಿಟ್, 5 ಮಂದಿಗೆ ಗಾಳಿಹಾಸಿಗೆ, 5 ಸೆಲ್ಫ್‌ಕೇರ್ ಕಿಟ್‌ಗಳನ್ನು ಹಸ್ತಾಂತರಿಸಲಾಯಿತು.



# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀಮತಿ ಮಂಜುಳ ವಿ ಪ್ರಸಾದ್
ಉಡುಪಿ



ಶ್ರೀಮತಿ ಚೈತ್ರ
ಮಂಗಳೂರು



ಶ್ರೀ ರಾಜೇಶ್ ಫಡ್ಕೆ
ಮುಂಡಾಜೆ



ಶ್ರೀಮತಿ ರಶ್ಮಿ ಯೋಗೀಶ್ ಭಿಡೆ
ಉಜಿರೆ



ಶ್ರೀ ಅವಿನಾಶ್ ಶೆಟ್ಟಿ, ಕನ್ಯಾಡಿ



ಶ್ರೀ ಡಿ.ಎನ್. ಗಿರೀಶ್, ಧರ್ಮಸ್ಥಳ



ಶ್ರೀಮತಿ ಪೂರ್ಣಿಮಾ ಕಿಣಿ,
ದೊಂಡೋಲೆ



ಶ್ರೀಮತಿ ಮತ್ತು ಶ್ರೀ ವಿಕ್ರಮ್ ಗೌಡ
ಧರ್ಮಸ್ಥಳ



ಮಾಸ್ಟರ್ ನಿತಿನ್ ಪ್ರದೀಪ್,
ಮಂಗಳೂರು



ಶ್ರೀಮತಿ ಮತ್ತು ಶ್ರೀ ಗಣೇಶ್ ಗೌಡ
ಕಲಾಯಿ, ಕೊಕ್ಕಡ



ಶ್ರೀ ಚರಿತ್ ಕುಮಾರ್ ಎಂ,
ಪುತ್ತೂರು



ಶ್ರೀಮತಿ ಪುಷ್ಪಲತ, ಧರ್ಮಸ್ಥಳ




ಶ್ರೀಮತಿ ಮತ್ತು ಶ್ರೀ ಯಶವಂತ
ಪಟವರ್ಧನ್, ಬೆಳ್ತಂಗಡಿ



ಶ್ರೀ ಪುರುಷೋತ್ತಮ್ ಪೂಜಾರಿ
ಗುರುವಾಯನಕೆರೆ



ಶ್ರೀಮತಿ ಮತ್ತು ಶ್ರೀ ಸಿದಾರ್ಥ್ ಆಲೂರ್
ಶಿರಸಿ



ಮಾಸ್ಟರ್ ಗೌರವ್, ಬೆಂಗಳೂರು

*Life would be tragic if it weren't funny*

# ಬೆನಕ ಆಸ್ಪತ್ರೆಯಲ್ಲಿ ಬೃಹತ್ ರಕ್ತದಾನ ಶಿಬಿರ



ಬೆನಕ ಹೆಲ್ತ್ ಸೆಂಟರ್, ಉಜಿರೆ ಇದರ ಆಶ್ರಯದಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ, ಮಂಗಳೂರು, ಲೇಡಿಗೋಷನ್, ಮಂಗಳೂರು ಇವರ ಸಹಯೋಗದೊಂದಿಗೆ ಗಣರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ಬೃಹತ್ ರಕ್ತದಾನ ಶಿಬಿರವು ಜನವರಿ 26 ರಂದು ಬೆನಕ ಆಸ್ಪತ್ರೆಯ ಸಭಾಂಗಣದಲ್ಲಿ ಜರುಗಿತು.


ಶಿಬಿರವನ್ನು ರೋಟರಿ ಕ್ಲಬ್ ಬೆಳ್ತಂಗಡಿಯ ಅಧ್ಯಕ್ಷರಾದ ರೊ. ಅನಂತ ಭಟ್ ಮಚ್ಚಿಮಲೆ ಉದ್ಘಾಟಿಸಿ, ರಕ್ತದಾನ ಮಾಡುವುದರಿಂದ ಉಂಟಾಗುವ ಪ್ರಯೋಜನದ ಬಗ್ಗೆ ಮಾತನಾಡಿದರು. ಸೇವಾಭಾರತಿ ಕನ್ಯಾಡಿ ಅಧ್ಯಕ್ಷೆ ಶ್ರೀಮತಿ ಸ್ವರ್ಣಗೌರಿ, ಬೆಳ್ತಂಗಡಿ ತಾಲೂಕು ಔಷಧ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಶ್ರೀಧರ ಕೆ.ವಿ, ಉಜಿರೆ ಹವ್ಯಕ ವಲಯದ ಅಧ್ಯಕ್ಷ ಶ್ರೀ ಶ್ಯಾಮ ಭಟ್ ಅತ್ತಾಜೆ, ರೆಡ್‌ಕ್ರಾಸ್ ಸೊಸೈಟಿ ಬೆಳ್ತಂಗಡಿಯ ಶಿವಕುಮಾರ್ ಮತ್ತು ಡಾ. ಭಾರತಿ ಜಿ.ಕೆ. ಶುಭ ಹಾರೈಸಿದರು. ಶಿಬಿರದಲ್ಲಿ ಒಟ್ಟು 73 ಯೂನಿಟ್ ರಕ್ತ ಸಂಗ್ರಹಿಸಲಾಯಿತು.

ಕನ್ಯಾಡಿಯ ಸೇವಾಭಾರತಿ ಇದರ ಶಿಬಿರ ಸಂಯೋಜನೆಯೊಂದಿಗೆ ಬೆಳ್ತಂಗಡಿ ತಾಲೂಕು ಔಷಧಿ ವ್ಯಾಪಾರಸ್ಥರ ಸಂಘ, ರೋಟರಿ ಕ್ಲಬ್ ಬೆಳ್ತಂಗಡಿ, ಹವ್ಯಕ ವಲಯ ಉಜಿರೆ, ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆ, ಬೆಳ್ತಂಗಡಿ ಶಿಬಿರದ ಯಶಸ್ಸಿಗೆ ಶ್ರಮಿಸಿತು.

# ಸೇವಾ ಸಂಗಮ

## ಆನ್‌ಲೈನ್ ಕಾರ್ಯಾಗಾರ



ಜನವರಿ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ. ತುಷಾರ ಕುಮಾರಿ, ಆಡಳಿತ ವೈದ್ಯಾಧಿಕಾರಿಗಳು ಮತ್ತು ದಂತ ವೈದ್ಯಾಧಿಕಾರಿಗಳು, ಕೊಕ್ಕಡ, ಇವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ದಂತ ಆರೈಕೆಯ ಬಗ್ಗೆ ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 40 ಮಂದಿ ಭಾಗವಹಿಸಿದ್ದರು.

## ನಿಮಗಿದು ತಿಳಿದಿರಲಿ

ಸಾಮಾನ್ಯ ವ್ಯಕ್ತಿಗಳಿಗೆ ಮೂತ್ರಕೋಶ ತುಂಬಿದ ಅನುಭವ ಬಂದಾಗ ಶೌಚಾಲಯಕ್ಕೆ ಹೋಗಿ ಮೂತ್ರ ವಿಸರ್ಜಿಸುತ್ತಾರೆ. ಆದರೆ ಬೆನ್ನುಹುರಿ ಅಪಘಾತಕ್ಕೆ ಒಳಗಾದ ವ್ಯಕ್ತಿಗಳಿಗೆ ಮೂತ್ರಕೋಶ ತುಂಬಿದ ಬಗ್ಗೆ ಮೆದುಳಿಗೆ ಸಂದೇಶ ತಲುಪದಿದ್ದ ಕಾರಣ ಮೂತ್ರ ವಿಸರ್ಜಿಸುವುದನ್ನು ಮರೆಯುತ್ತಾರೆ. ಇದರಿಂದ ಮೂತ್ರಕೋಶದ ತೊಂದರೆಗೆ ಒಳಗಾಗುತ್ತಾರೆ.

### ನಿರ್ವಹಣಾ ವಿಧಾನ:

- ಕ್ರಮಬದ್ಧವಾಗಿ ಮೂತ್ರನಳಿಕೆಯನ್ನು ಉಪಯೋಗಿಸಿ ಪ್ರತಿ 3 ರಿಂದ 4 ಗಂಟೆಗಳಿಗೊಮ್ಮೆ ಮೂತ್ರವನ್ನು ಖಾಲಿ ಮಾಡಬೇಕು

## ಮೂತ್ರಕೋಶ/ ಮೂತ್ರಪಿಂಡದ ಸಮಸ್ಯೆಗಳು

- ನಿರಂತರವಾಗಿ ಸೋರುವ ಮೂತ್ರವನ್ನು ಸಂಗ್ರಹಿಸಲು ನಿರೋದ್‌ಮೂತ್ರನಳಿಕೆಯನ್ನು ಉಪಯೋಗಿಸಬೇಕು.
- ಬೆನ್ನುಹುರಿ ಅಪಘಾತಕ್ಕೆ ಒಳಗಾದ ಹೆಂಗಸರು ಪ್ರತಿ 4 ರಿಂದ 6 ಗಂಟೆಗಳಿಗೊಮ್ಮೆ ಕ್ರಮಬದ್ಧವಾಗಿ ಮೂತ್ರನಳಿಕೆಯನ್ನು ಉಪಯೋಗಿಸಬೇಕಾಗುತ್ತದೆ.
- ಮೂತ್ರನಳಿಕೆಯನ್ನು ಉಪಯೋಗಿಸುವಾಗ ಸೋರಿಕೆಯಿದ್ದರೆ ಮೂತ್ರಹೀರುವ ಸಣ್ಣ ಟವೆಲ್ ಅಥವಾ ವಸ್ತ್ರವನ್ನು ಬಳಸಬೇಕು. ಮೂತ್ರನಳಿಕೆಯನ್ನು ಎಚ್ಚರಿಕೆಯಿಂದ ಬಳಸದಿದ್ದರೆ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ ಕಿಟ್‌ಗಳು.

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

## Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

# ಬೆನ್ನುಹುರಿ ಅಪಘಾತಕ್ಕೊಳಗಾಗಿ, ಪ್ರಸ್ತುತ ಹೃದಯ ಸಮಸ್ಯೆಯಿಂದ ಕಷ್ಟ ಅನುಭವಿಸುತ್ತಿರುವ ದಿವ್ಯಾಂಗನ ಕೈಹಿಡಿದ ಸೇವಾಭಾರತಿ ಸಂಸ್ಥೆ.

**ಬಾಬಣ್ಣ ಮಂದಾರ್ತಿ** ಇವರು ಮೂಲತ: ಬ್ರಹ್ಮಾವರ ತಾಲೂಕು ಮಂದಾರ್ತಿ ಗ್ರಾಮದ ಹೆಗ್ಗುಂಜೆ ನಿವಾಸಿ. ಜನವರಿ 1 1969 ರಲ್ಲಿ 5ನೇ ಮತ್ತು ಏಕಮಾತ್ರ ಪುತ್ರನಾಗಿ ಜನಿಸಿದ ಇವರಿಗೆ 7 ಮಂದಿ ಸಹೋದರಿಯರು. ಜಾನುವಾರು ಕಟ್ಟೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತದನಂತರ ಮಂದಾರ್ತಿಯ ದುರ್ಗಾ ಪರಮೇಶ್ವರಿ ಶಾಲೆಯಲ್ಲಿ ಪ್ರೌಢ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿದರು. ಮನೆಯಲ್ಲಿ ಬಡತನವಿದ್ದ ಕಾರಣ ಮುಂದಿನ ಶಿಕ್ಷಣ ಮುಂದುವರೆಸಲು ಸಾಧ್ಯವಾಗದೆ ಮನೆಗಾಗಿ ಹಾರ್ಡ್‌ವೇರ್ ಅಂಗಡಿಯಲ್ಲಿ ಸೇಲ್ಸ್‌ಮ್ಯಾನ್ ಆಗಿ ತಮ್ಮ ಉದ್ಯೋಗ ಪ್ರಾರಂಭಿಸಿದರು. ಕಾಲಘಟ್ಟ ಕಳೆಯುತ್ತಿದ್ದಂತೆ ದುಡಿಮೆ ಸಾಲದೆ ತಂಗಿಯ ಮದುವೆ ಸಂಧರ್ಭದಲ್ಲಿ ಕೂಲಿಕೆಲಸ, ಗಾರೆಕೆಲಸ, ಅಕ್ಕಿ ಮಿಲ್ಲಿನಲ್ಲಿ ಕೆಲಸ ಹೀಗೆ ನಾನಾ ಉದ್ಯೋಗ ಮಾಡಲು ಪ್ರಾರಂಭಿಸಿದರು. ತಂಗಿಯ ಮದುವೆಯ ಬಳಿಕ 2005 ರಲ್ಲಿ ಬಾಬಣ್ಣ ಮಂದಾರ್ತಿ ವಿವಾಹ ಜೀವನಕ್ಕೆ ಕಾಲಿಟ್ಟರು. 2006 ಮತ್ತು 2009 ರಲ್ಲಿ ಪುತ್ರಿ ಮತ್ತು ಪುತ್ರನಿಗೂ ಜನ್ಮವಿತ್ತರು.


**ಕಷ್ಟ–ಸುಖಗಳನ್ನು ಸಂಭಾಳಿಸಿಕೊಂಡು ಹೋಗುತ್ತಿದ್ದ ದಿನಗಳಲ್ಲಿ ಸಂಸಾರದೊಂದಿಗೆ ಅನ್ಯೋನ್ಯವಾಗಿ ಕಾಲ ಕಳೆಯುತ್ತಿದ್ದರು. ಹೀಗೆ ಜೀವನ ಸಾಗಿಸುತ್ತಿದ್ದ ಸಂಧರ್ಭದಲ್ಲಿ ಮನೆಯಲ್ಲಿ ಗೇರುಮರದಿಂದ ಬಿದ್ದರು. ಪ್ರಾಥಮಿಕ ಚಿಕಿತ್ಸೆಗೆಂದು ಬ್ರಹ್ಮಾವರದ ಸರಕಾರಿ ಆಸ್ಪತ್ರೆಯಲ್ಲಿ ಪಡೆದರು. ಮುಂದಿನ ಹೆಚ್ಚಿನ ಚಿಕಿತ್ಸೆ ಮುಂದುವರೆಸಲು ಸಾಧ್ಯವಾಗದ ಕಾರಣ ಮಣಿಪಾಲದ ಕೆ.ಎಂ.ಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸಂಧರ್ಭದಲ್ಲಿ ಅವರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ವಿಷಯ ತಿಳಿಸಿದರು. ಇನ್ನುಮುಂದೆ ನಡೆದಾಡಲು ಸಾಧ್ಯವಿಲ್ಲ ಹಾಗೂ ಗಾಲಿಕುರ್ಚಿಯ ಮುಖಾಂತರ ಮಾತ್ರ ಚಲಿಸಲು ಸಾಧ್ಯವೆಂದು ಮನವರಿಕೆ ಮಾಡಿದರು.**

2019 ರಲ್ಲಿ ಸೇವಾಧಾಮದ ಸಂಸ್ಥಾಪಕರಾದಂತಹ ಶ್ರೀ ಕೆ.ವಿನಾಯಕರಾವ್ ರವರ ಬಗ್ಗೆ ಪಂಚಾಯತ್ ಮುಖಾಂತರ ತಿಳಿದು ಸೇವಾಭಾರತಿ ಸಂಪರ್ಕಕ್ಕೆ ಬಂದರು. ಉಡುಪಿಯಲ್ಲಿ 2021 ರಲ್ಲಿ ಟಿ.ಎಂ.ಎ. ಪೈ ಆಸ್ಪತ್ರೆಯಲ್ಲಿ ನಡೆಸಿದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ, ಪುನಶ್ಚೇತನದ ಬಗ್ಗೆ ಮಾಹಿತಿ ತಿಳಿದುಕೊಂಡ ಬಳಿಕ ಸೇವಾಧಾಮಕ್ಕೆ ಪುನಶ್ಚೇತನಕ್ಕೆಂದು ಬಂದರು. 2021 ರಲ್ಲಿ ಪುನಶ್ಚೇತನ ಪಡೆದ ನಂತರ ತಮ್ಮ ಕೆಲಸ ತಾವೇ ಮಾಡುವಷ್ಟು ಸಬಲರಾದರು. ಸೇವಾಭಾರತಿ ವತಿಯಿಂದ ಗಾಲಿಕುರ್ಚಿ, ಹತ್ತಿಯಿಂದ ಬತ್ತಿ ಮಾಡುವ ಯಂತ್ರವನ್ನು ಪಡೆದಿರುತ್ತಾರೆ. ಬತ್ತಿ ಮಾಡುವ ಉದ್ಯೋಗದಿಂದ ಮಾಸಿಕವಾಗಿ 1500/– ದುಡಿದು ಸಂಪಾದನೆ ಮಾಡುತ್ತಿದ್ದಾರೆ.

ಹೀಗೆ ಬೆನ್ನುಹುರಿ ಅಪಘಾತಗೊಂಡರೂ ಧೃತಿಗೆಡದೆ, ಪತ್ನಿ ಮತ್ತು ಮಕ್ಕಳ ಸಹಕಾರ ಹಾಗೂ ಬೆಂಬಲದಿಂದ ಜೀವನ ಸಾಗಿಸುತ್ತಿದ್ದರು. ಆದರೆ ವಿಧಿಯ ಆಟ ಬೇರೆಯದೇ ಆಗಿತ್ತು. ಬೆನ್ನುಹುರಿ ಅಪಘಾತಗೊಂಡು ಜೀವನಪರ್ಯಂತ ಅಂಗವಿಕಲತೆಯ ಕಷ್ಟವನ್ನು ಅನುಭವಿಸುವುದಲ್ಲದೆ, ದೇವರು ಇವರಿಗೆ ಪುನಃಜೀವನದಲ್ಲಿ ಪರೀಕ್ಷೆ ಇಟ್ಟರು. 2023 ಅಕ್ಟೋಬರ್ ತಿಂಗಳಿನಲ್ಲಿ ಎದೆಉರಿ ಕಾಣಿಸಿಕೊಂಡಿತು. ಇವರು ವಾಯು ಸಮಸ್ಯೆ ಇರಬಹುದು ಎಂದು ಅಸಡ್ಡೆ ಮಾಡಿದರು. ಪುನಃ ಎದೆಉರಿ ಕಾಣಿಸಿಕೊಂಡಾಗ ವೈದ್ಯರಲ್ಲಿಗೆ ತೆರಳಿದರು. ವೈದ್ಯರು ನಿರ್ಲಕ್ಷಿಸಿ ವಾಯುಸಮಸ್ಯೆ ಇರಬಹುದೆಂದು ಔಷಧಿ ನೀಡಿದರು. ಇಷ್ಟದರೂ ನೋವು ಕಡಿಮೆ ಆಗಲಿಲ್ಲ. ಏನು ಮಾಡುವುದು ಎಂದು ತೋಚದೆ ಇದ್ದ ಸಂಧರ್ಭದಲ್ಲಿ ಸೇವಾಧಾಮದ ಸಂಸ್ಥಾಪಕರಾದ ಕೆ.ವಿನಾಯಕರಾವ್‌ರವರನ್ನು ಸಂಪರ್ಕಿಸಿದಾಗ ಯಾವುದೇ ಕಾರಣಕ್ಕೂ ಇನ್ನುಮುಂದೆ ತಡಮಾಡದೇ ಆಸ್ಪತ್ರೆಗೆ ದಾಖಲಾಗುವಂತೆ ತಿಳಿಸಿದರು. ಒಂದಲ್ಲ ಎರಡಲ್ಲ ಮೂರನೇ ಆಸ್ಪತ್ರೆಯಲ್ಲಿ ದಾಖಲಾಗಿ ಅಂಜಿಯೋಗ್ರಾಂ ಮಾಡಿದಾಗ ಇವರಿಗೆ ಹೃದಯದಲ್ಲಿ ಬ್ಲಾಕ್ ಇರುವುದು ಕಂಡು ಬಂದಿತು. ಬಡತನದಲ್ಲಿರುವ ಕುಟುಂಬಕ್ಕೆ ಮುಂದೆ ಏನು ಮಾಡುವುದು ಎಂದು ತೋಚದೇ ಇದ್ದಾಗ ಪುನಃ ಬೆಳಕಾಗಿ ಬಂದು ಸೇವಾಭಾರತಿ ಸಂಸ್ಥೆಯು ಧನಸಹಾಯ ಮಾಡುವುದಾಗಿ ಭರವಸೆ ಇತ್ತರು. ಈಗ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ಹೀಗೆ ಕೆಲವೊಂದು ಬಾರಿ ದೇವರು ಕಷ್ಟಗಳನ್ನು ಕೊಡುತ್ತಾ, ಮನುಷ್ಯನಿಗೆ ಪರೀಕ್ಷೆಗಳನ್ನು ಇಟ್ಟು, ಜೀವನದಲ್ಲಿ ಏರು–ಪೇರುಗಳನ್ನು ಉಂಟು ಮಾಡುತ್ತಾರೆ.

ಯಾವುದೇ ವ್ಯಕ್ತಿಯು ಎದೆಉರಿ ಹಾಗೂ ಇನ್ನಿತರ ಸಮಸ್ಯೆಗಳು ಕಾಣಿಸಿಕೊಂಡಾಗ ಅದನ್ನು ನಿರ್ಲಕ್ಷಿಸದೆ ವೈದ್ಯರನ್ನು ಭೇಟಿಮಾಡಿ ಸೂಕ್ತ ಸಲಹೆಗಳನ್ನು ಕೇಳುವುದು. ಇಲ್ಲವಾದಲ್ಲಿ ಸೇವಾಭಾರತಿ ವತಿಯಿಂದ ಪ್ರತೀ ತಿಂಗಳು ಆಯೋಜಿಸುವ ಸೇವಾಸಂಗಮ ಆನ್‌ಲೈನ್ ಕಾರ್ಯಾಗಾರದಲ್ಲಿ ಭಾಗವಹಿಸಿ ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆದುಕೊಳ್ಳುವುದು. ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಆರೋಗ್ಯದ ಬಗ್ಗೆ ಗಮನ ವಹಿಸುವುದರಿಂದ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಪ್ರತಿಯೊಬ್ಬ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕಿವಿಮಾತು ನೀಡಿದರು.

ಸೇವಾಭಾರತಿಯು ನೀಡುತ್ತಿರುವ ನಿರಂತರ ಬೆಂಬಲ ಹಾಗೂ ಸಹಕಾರಕ್ಕೆ ಬಾಬಣ್ಣ ಮಂದಾರ್ತಿ ಸದಾಕಾಲ ಚಿರಋಣಿ ಎಂದು ತಮ್ಮ ಸಂತೋಷ ವ್ಯಕ್ತಪಡಿಸಿ ಕೃತಜ್ಞತೆ ವ್ಯಕ್ತಪಡಿಸಿರುತ್ತಾರೆ.





**ಬಾಬಣ್ಣ ಮಂದಾರ್ತಿ 2021 ರಲ್ಲಿ ಪುನಶ್ಚೇತನ ಪಡೆದ ನಂತರ ತಮ್ಮ ಕೆಲಸ ತಾವೇ ಮಾಡುವಷ್ಟು ಸಬಲರಾದರು. ಸೇವಾಭಾರತಿ ವತಿಯಿಂದ ಗಾಲಿಕುರ್ಚಿ, ಹತ್ತಿಯಿಂದ ಬತ್ತಿ ಮಾಡುವ ಮಿಷನನ್ನು ಪಡೆದಿರುತ್ತಾರೆ. ಬತ್ತಿ ಮಾಡುವ ಉದ್ಯೋಗ ದಿಂದ ಮಾಸಿಕವಾಗಿ 1500/– ದುಡಿದು ಸಂಪಾದನೆ ಮಾಡುತ್ತಿದ್ದು, ಇತರರಿಗೆ ಸ್ಫೂರ್ತಿಯಾಗಿದ್ದಾರೆ.**